<u>ಅಸಲು ದಾವಾ ಸಂಖ್ಯೆ - **147/2018**</u> ಪಿ.ಡಬ್ಲ್ಯೂ **:-1**

ದಿನಾಂಕಃ **04-04-2024** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

ನನಗೆ ಆಂಗ್ಲ ಭಾಷೆಯನ್ನು ಓದಲು ಬರುವುದಿಲ್ಲ. ಶಿವರಾಜಚಾರಿ ಬಿನ್ ಚಾಮಚಾರಿ ನನಗೆ ಚಿಕ್ಕಪ್ಪನಾಗಬೇಕು. ಪಾಲು ವಿಭಾಗ ಕೋರಿ ಈ ದಾವೆಯ ಪ್ರತಿವಾದಿ, ನಮ್ಮ ತಂದೆ ಮತ್ತು ನನ್ನ ತಂದೆಯ ಅಣ್ಣತಮ್ಮಂದಿರು ಮತ್ತು ಅಕ್ಕಂದಿರ ಮೇಲೆ ಶಿವರಾಜಚಾರಿ ಬಿನ್ ಚಾಮಚಾರಿ ಅಸಲು ದಾವಾ ಸಂ.180/09 ನ್ನು ಸಲ್ಲಿಸಿದರು ಎಂದರೆ ಸರಿ. ಈ ದಾವೆಯ ದಾವಾ ಷಡ್ಯೂಲ್ ಆಸ್ತಿಯನ್ನು ಸಹ ಸೇರಿಸಿ, ಭಾಗಂಶವನ್ನು ಕೋರಿದರು ಎಂದರೆ ನನಗೆ ಗೊತ್ತಿಲ್ಲ. ಅಸಲು ದಾವಾ ಸಂ.180/09 ರಲ್ಲಿ ದಾವಾ ಐಟಂ ನಂ.4 ರ ಆಸ್ತಿಯು ಈ ದಾವೆಯ ದಾವಾ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದ ಬಗ್ಗೆ ನಾನು ನನ್ನ ತಂದೆಯಿಂದ ತಿಳಿದುಕೊಂಡಿರುವುದಿಲ್ಲ. ನನ್ನ ಚಿಕ್ಕಪ್ಪರು ಮತ್ತು ಅತ್ತೆಯಂದಿರು ಭಾಗಂಶ ಕೋರಿ ಎಷ್ಟು ದಾವೆಗಳನ್ನು ಸಲ್ಲಿಸಿದರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ವೀರಚಾರಿ ಮತ್ತು ಶ್ಯಾಮಚಾರಿ ನನ್ನ ತಂದೆಯ ಸಹೋದರರು ಎಂದರೆ ಸರಿ. ಆರ್.ಎ ನಂ. 64/17 ರಲ್ಲಿ ನಾನು ಯಾವುದೇ ಸಮನ್ಸ್‌ನ್ನು ಪಡೆದುಕೊಂಡಿರುವುದಿಲ್ಲ.

ನಾನು ಮತ್ತು ನನ್ನ ತಮ್ಮಂದಿರು ಈಗ ಪ್ರತ್ಯೇಕವಾಗಿ ವಾಸಿಸುತ್ತಿದ್ದೇವೆ. ನನ್ನ ಇಬ್ಬರು ತಮ್ಮಂದಿರು ಈಗೇ 12-13 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಾಗಿದ್ದರೆ. ನನ್ನ ಇಬ್ಬರು ತಮ್ಮಂದಿರು ಯಾವತ್ತು ಗೋವಿನಕೋವಿ ಗ್ರಾಮದಲ್ಲಿ ವಾಸವಾಗಿಲ್ಲ ಎಂದರೆ ಸರಿ. ದಾವಾ ಆಸ್ತಿಯು ನಮ್ಮ ಕುಟುಂಬಕ್ಕೆ ಹೇಗೆ ಬಂತು ಎನ್ನುವ ವಿಚಾರ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ನನ್ನ ಅಜ್ಜನಾದ ಎ ಬಸಪ್ಪ ರವರ ಆಸ್ತಿಯಾಗಿರುತ್ತದೆ. ನನ್ನ ಅಜ್ಜ ಎ ಬಸಪ್ಪರವರು ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ. ಆದರೆ ಯಾವ ವರ್ಷ ಮತ್ತು ಯಾರಿಂದ ಖರೀದಿ ಮಾಡಿರುತ್ತಾರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ನನ್ನ ದಾವಾ ಪತ್ರದಲ್ಲಿ ಆಗಲೀ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಆಗಲೀ ದಾವಾ ಆಸ್ತಿಯನ್ನು ನಮ್ಮ ಅಜ್ಜ ಖರೀದಿ ಮಾಡಿದರೆ ಎಂದು ಹೇಳಿಲ್ಲ ಎಂದರೆ ಸರಿ. ಅಸಲು ದಾವಾ ಸಂ. 138/09 ಮತ್ತು ಎಫ್.ಡಿ.ಪಿ ನಂ.2/15 ರಲ್ಲಿ ಆದ ಆದೇಶದ ಬಗ್ಗೆ ನನಗೆ ಗೊತ್ತಿಲ್ಲ. ಎಫ್.ಡಿ.ಪಿ ನಂ.2/15 ರಲ್ಲಿ ನನ್ನ ಅತ್ತೆ ಮತ್ತು ನನ್ನ ತಂದೆಗೆ ಕುಟುಂಬದ ಆಸ್ತಿಗಳು ಹಿಸ್ಸೆ ವಿಂಗಡಣೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಎಫ್.ಡಿ.ಪಿ

ನಂ.2/15 ರಲ್ಲಿ ಆದೇಶವಾದ ನಂತರ ಈ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಅಜ್ಜ ಎ. ಬಸಪ್ಪನ ಹೆಸರಿಗೆ ಸುಮಾರು 5 ಎಕರೆ ಜಮೀನು ಇತ್ತು. ನಾನು 5 ಎಕರೆ ಜಮೀನಿನ ಮೇಲೆ ಈ ದಾವೆಯನ್ನು ಸಲ್ಲಿಸಿಲ್ಲ ಎಂದರೆ ಸರಿ. 5 ಎಕರೆ ಜಮೀನಿನ್ನು ನನ್ನ ತಂದೆ ಮತ್ತು ಚಿಕ್ಕಪ್ಪಂದಿರು ವಿಭಾಗ ಮಾಡಿಕೊಂಡಿರುತ್ತಾರೆ. 5 ಎಕರೆ ಜಮೀನಿನಲ್ಲಿ ನಮ್ಮ ಅತ್ತೆಗೆ 1 ಎಕರೆ ಜಮೀನನ್ನು ನೀಡಿರುತ್ತೇವೆ. 5 ಎಕರೆ ಜಮೀನಿನ್ನು ನನ್ನ ತಂದೆ ಮತ್ತು  ಚಿಕ್ಕಪ್ಪಂದಿರು ವಿಭಾಗ ಮಾಡಿಕೊಂಡ ಬಗ್ಗೆ ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ. 5 ಎಕರೆ ಜಮೀನನ್ನು ನನ್ನ ತಂದೆ ಮತ್ತು ಚಿಕ್ಕಪ್ಪಂದಿರು ಬಾಯಿ ಮಾತಿನ ಮೇಲೆ ಜಮೀನನ್ನು ಹಂಚಿಕೊಂಡಿರುತ್ತಾರೆ. ಸದರಿ ಜಮೀನಿನ ಪಹಣಿ ಮತ್ತು ಖಾತೆ ಈಗಲ್ಲೂ ಸಹ ನನ್ನ ಅಜ್ಜ ಹೆಸರಿನಲ್ಲಿ ಇರುತ್ತದೆ. ನಮ್ಮ ತಂದೆ, ನನ್ನ ಚಿಕ್ಕಪ್ಪಂದಿರು ಮತ್ತು ಅತ್ತೆಯಂದಿರಿಗೆ ನ್ಯಾಯಾಲಯದಲ್ಲಿ ಎಫ್.ಡಿ.ಪಿ ನಂ.2/15 ರಂತೆ ಭಾಗಂಶವಾಗಿದ್ದರೂ ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 5 ಎಕರೆ ಜಮೀನಿನಲ್ಲಿ ನನ್ನ ತಂದೆ ಮತ್ತು ಚಿಕ್ಕಪ್ಪಂದಿರು ಮತ್ತು ಅತ್ತೆಯಂದಿರು ಹಂಚಿಕೊಂಡಿದ್ದರಿಂದ ಸದರಿ ಜಮೀನನ್ನು ಈ ದಾವೆಯಲ್ಲಿ ನಮೂದು ಮಾಡಿರುವುದಿಲ್ಲ. ದಾವಾ ಆಸ್ತಿಯು ಪ್ರತಿವಾದಿಗೆ ಹೇಗೆ ಬಂತು  ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಸಾಕ್ಷಿಗೆ ದಾವಾ ಆಸ್ತಿಯು ಪ್ರತಿವಾದಿಗೆ ಹೇಗೆ ಬಂತು  ಎಂಬ ವಿಚಾರವನ್ನು ತಿಳಿದುಕೊಂಡು ನ್ಯಾಯಾಲಯಕ್ಕೆ ಹೇಳಲು ಆಗುತ್ತದೆಯೇ ಎಂದರೆ ಸಾಕ್ಷಿಯು ಆಗುವುದಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಪಹಣಿ, ಮ್ಯುಟೇಷನ್ ಮತ್ತು ಇ.ಸಿ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.